**ದಿನಾಂಕ: 18.09.2021 ರಂದು ಸಮಯ 10.30 ಗಂಟೆಗೆ ವಾರ್ಡ್ 154–ಬಸವನಗುಡಿ ವಾರ್ಡಿಗೆ ಸಂಬಂಧಿಸಿದಂತೆ ವಿವಿಧ್ದೋದ್ದೇಶ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

## ಹಾಜರಿದ್ದವರು

1. ಶ್ರೀ. ಮಂಜುನಾಥ ರೆಡ್ಡಿ, ವಾರ್ಡ್ ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರು ವಾರ್ಡ್ 154
2. ಶ್ರೀ. ಗಿರೀಶ , ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ 154 ಹಾಗೂ ಸದಸ್ಯ ಕಾರ್ಯದರ್ಶಿ
3. ಶ್ರೀ. ಹೇಮಂತ್ ಕುಮಾರ್. ಕೆ.ಹೆಚ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ 154
4. ಶ್ರೀ. ಬಾಲಕೃಷ್ಣ. ಎನ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–154.
5. ಶ್ರೀ. ಎನ್. ನಾರಾಯಣ, ಕಂದಾಯ ಪರಿವೀಕ್ಷಕರು, ವಾರ್ಡ್ 154
6. ಶ್ರೀ. ಗೋಪಾಲಕೃಷ್ಣ, ಕಂದಾಯ ವಸೂಲಿಗಾರರು ವಾರ್ಡ್ 154
7. ಶ್ರೀ. ರಮೇಶ್ ಅರಿಸಿಕೆರಿ, Water Inspector, ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾರ್ಡ್–154
8. ಶ್ರೀ.ಸದಾನಂದ, ಪೋಲೀಸ್ ಬಸವನಗುಡಿ ಸಂಚಾರಿ ಠಾಣೆ
9. ಶ್ರೀ. ಮುನಿರಾಜು ಕೆ., ಕಿರಿಯ ಅಭಿಯಂತರರು, BESCOM ವಾರ್ಡ್ 154

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಅಧ್ಯಕ್ಷರಾದ ಶ್ರೀ ಮಂಜುನಾಥ ರೆಡ್ಡಿ ರವರು ಪ್ರತಿ ತಿಂಗಳ ಮೊದಲನೇ/ಮೂರನೇ ಶನಿವಾರ ನಡೆಸಬೇಕೆಂದು ತಿಳಿಸುತ್ತ ಸಭೆಯಲ್ಲಿ ಉಪಸ್ಥಿತರಿರುವ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ವಾರ್ಡ್ ನೋಡಲ್ ಅಧಿಕಾರಿಯವರು ಮಾತನಾಡಿ ಮಲ್ಲಿಕರ್ಜುನ ಸ್ವಾಮಿ ದೇವಸ್ಥಾನದ ಹತ್ತರ ಕಸ ಹಾಗೂ ಡೆಬ್ರಿಸ್‌ಗಳನ್ನು ಹಾಕಿದ್ದು ಇದನ್ನು ತೆರವುಗೊಳಿಸಲು ಕ್ರಮಕ್ಕೈಗೊಳ್ಳಲು ಸೂಚಿಸಿದರು.

**ಕ್ರಮ: – ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್154,**
**ಸಹಾಯಕ ಅಭಿಯಂತರರು ವಾರ್ಡ್–154**
**ರವರಿಗೆ ಕ್ರಮಕ್ಕೈಗೊಳ್ಳಲು ಕೋರಲಾಗಿರುತ್ತದೆ.**

ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕೆಲವು ರಸ್ತೆಯಲ್ಲಿ ಸ್ಟ್ರೀಟ್ ಲೈಟ್ ಉರಿಯುತ್ತಿರುವುದಿಲ್ಲದ್ದರಿಂದ ಇದನ್ನು ಸರಿಪಡಿಸಲು ಕ್ರಮವಹಿಸಲು ಸೂಚಿಸಿದರು.

**ಕ್ರಮ: ಕಾರ್ಯಪಾಲಕ ಅಭಿಯಂತರರು (ವಿದ್ಯುತ್–ದಕ್ಷಿಣ)**
**ರವರಿಗೆ ಶೀಘ್ರವಾಗಿ ಕ್ರಮ ವಹಿಸಲು ಕೋರಲಾಗಿರುತ್ತದೆ.**

ಬಸವನಗುಡಿ ವಾರ್ಡ ವ್ಯಾಪ್ತಿಯಲ್ಲಿ ಬರುವ ದುರಸ್ತಿಯಾಗಬೇಕಾಗಿರುವ ರಸ್ತೆ ಹಾಗೂ ಚರಂಡಿಗಳನ್ನು ಪಟ್ಟಿಮಾಡಲು ಕ್ರಮವಹಿಸಲು ತಿಳಿಸಿದರು.

**ಕ್ರಮ: - ಸಹಾಯಕ ಅಭಿಯಂತರರು ವಾರ್ಡ್-154 ರವರಿಗೆ ಕ್ರಮಕೈಗೊಳ್ಳಲು ಕೋರಲಾಗಿರುತ್ತದೆ**

ನೋಡಲ್ ಅಧಿಕಾರಿಗಳು ಮಾತನಾಡಿ ಕಂದಾಯ ಇಲಾಖೆಯ ಬೇ-ಬಾಕಿ ಇರುವ ಸ್ವತ್ತುಗಳಿಗೆ ನೋಟೀಸ್ ಜಾರಿ ಮಾಡಿ ಕಂದಾಯ ವಸೂಲಿ ಮಾಡಲು ತಿಳಿಸಿರುತ್ತಾರೆ.

**ಕ್ರಮ: ಕಂದಾಯ ಅಧಿಕಾರಿ, ಬಸವನಗುಡಿ ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ**

ನೋಡಲ್ ಅಧಿಕಾರಿಗಳು ಮಾತನಾಡಿ ಬ್ಯೂಗಲ್ ರಾಕ್ ರಸ್ತೆಯಲ್ಲಿ ನೀರು ಸೋರಿಕೆ ಆಗುತ್ತಿರುವುದನ್ನು ಗಮನಿಸಿ, ಅದನ್ನು ಪರಿಶೀಲಿಸಿ ಸರಿಪಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರಿಗೆ ತಿಳಿಸಿರುತ್ತಾರೆ.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಎಂ.ಎನ್.ಕೆ ಪಾರ್ಕ್ ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ**

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

AE154

18/9

**ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ**
**ವಾರ್ಡ್ ಸಂಖ್ಯೆ 154-ಬಸವನಗುಡಿ**

<u>ಪ್ರತಿಯನ್ನು:</u>

1) ಮಾನ್ಯ ಆಯುಕ್ತರು ರವರ ಆಪ್ತ ಶಾಖೆಗೆ ಅವಗಾಹನೆಗೆ ತರಲು ಕಳುಹಿಸಿದೆ.
2) ವಲಯ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
3) ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
4) ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ,
5) ಕಾರ್ಯಪಾಲಕ ಅಭಿಯಂತರರು (ಬಸವನಗುಡಿ) /ಸ.ಕಾ.ನಿ.ಅ (ಬ.ಗು) ಉಪವಿಭಾಗ ರವರ ಅವಗಾಹನೆಗೆ.
6) ಆರೋಗ್ಯ ವೈದ್ಯಾಧಿಕಾರಿಗಳು, ಬಸವನಗುಡಿ ವಿಭಾಗ ರವರ ಅವಗಾಹನೆಗೆ.
7) ಪೋಲೀಸ್ ಇನ್ಸ್‌ಪೆಕ್ಟರ್, ಬಸವನಗುಡಿ ಕಾನೂನು ಸುವ್ಯವಸ್ಥೆ ಪೋಲೀಸ್ ಠಾಣೆ ರವರ ಅವಗಾಹನೆಗೆ.
8) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ, ಎಂ.ಎನ್.ಕೆ ಪಾರ್ಕ್, ಬಸವನಗುಡಿ ರವರ ಅವಗಾಹನೆಗೆ.
9) ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
10) ಕಛೇರಿ ಕಡತಕ್ಕೆ.